# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 11.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಎಂ ಜಿ ರೇಣುಕಯ್ಯ ಬಿನ್ ಲೇ. ಗುರುದೇವರು |
| ವರ್ಷ | 70 ವರ್ಷ |
| ಕೆಲಸ | ವ್ಯವಸಾಯ |
| ವಾಸ್ತವ್ಯ | ಮೂಗನಾಯಕನ ಕೋಟೆ ಗ್ರಾಮ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಮುಂದುವರೆದ ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ. ಹೆಚ್ ಎಲ್ ಅರ್ ಎಸ್ ರವರಿಂದ

ದಿಃ 09.02.1978 ರಂದು ವಿಭಾಗ ಆದಾಗ ಜಮೀನಿನಲ್ಲಿ ತೆಂಗಿನ ಮರಗಳು ಮತ್ತು ಖಾಲಿ ಜಮೀನು ಎರಡೂ ಇತ್ತು ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ತೆಂಗಿನ ತೋಟಕ್ಕೆ ಚೆಕ್ಕುಬಂದಿಯನ್ನು ಪೂರ್ವಕ್ಕೆ – ಇದೇ ನಂಬರ್ ಪೈಕಿ ನಿಮ್ಮ ಹಿಸ್ಸೆಯ ಹೊಲ, ಪಶ್ಚಿಮಕ್ಕೆ – ಚನ್ನವೀರಪ್ಪನ ತೆಂಗಿನ ತೋಟ, ಉತ್ತರಕ್ಕೆ – ಸಿದ್ದಬೋರಪ್ಪ ಮತ್ತು ರುದ್ರಪ್ಪ ರವರ ಜಮೀನು, ದಕ್ಷಿಣಕ್ಕೆ – ನಿಮ್ಮ ತಮ್ಮ ಸಿದ್ದಲಿಂಗಮೂರ್ತಿ ರವರ ತೆಂಗಿನ ತೋಟ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಖಾಲಿ ಜಮೀನಿಗೆ ಚಕ್ಕುಬಂದಿಯನ್ನು ಪೂರ್ವಕ್ಕೆ – ಎ ಕೆ ಸಾಕಮ್ಮ ರವರ ಹೊಲ, ಪಶ್ಚಿಮಕ್ಕೆ – ನಿಮ್ಮ ಮತ್ತು ಪ್ರತಿವಾದಿಯ ಭಾಗಕ್ಕೆ ಬಂದಿರುವ ತೆಂಗಿನ ತೋಟ, ಉತ್ತರಕ್ಕೆ – ನಂಜಯ್ಯ ರವರ ಹೊಲ, ದಕ್ಷಿಣಕ್ಕೆ – ಪ್ರತಿವಾದಿಯ ಭಾಗಕ್ಕೆ ಬಂದಿರುವ ಖುಷ್ಕಿ ಜಮೀನು ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ತೆಂಗಿನ ತೋಟ ಪೂರ್ವ – ಪಶ್ಚಿಮವಾಗಿ ಉದ್ದಕ್ಕೆ

ಇರುತ್ತದೆ ಎಂದರೆ ಸರಿ. ನಿಮ್ಮ ಭಾಗಂಶಕ್ಕೆ ಬಂದ ಖುಷ್ಕಿ ಹೊಲ ಆ ಸಮಯದಲ್ಲಿ ಚೌಕಕಾರವಾಗಿತ್ತು ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ರಾಜಶೇಖರಯ್ಯ, ಕೃಷ್ಣಮೂರ್ತಿ, ಹುನುಮಂತ ಕೋಟಿ ರವರು ನಿಮ್ಮ ಚೆನ್ನಾಗಿ ಇದ್ದಾರಾ ಎಂದರೆ ಸಾಕ್ಷಿಯು ಅನ್ಯೋನ್ಯವಾಗಿ ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಉತ್ತರದ ಜಮೀನವರು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಹದ್ದುಬಸ್ತು ಮಾಡಿಕೊಳ್ಳಿ ಎಂದು ಸರ್ವೆ ರವರು ನಿಮಗೆ ಹೇಳಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಕ್ಷಿಣ ಭಾಗದಲ್ಲಿ ಪ್ರತಿವಾದಿಯು ದಾವಾಸ್ವತ್ತಿನ 6-7 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ.8 ಅನ್ನು ಓದಿ ತಿಳಿಸಿ ನೀವು ನಿಪಿ.8 ರಂತೆ ಸರ್ವೆಯರ್ ಮುಂದೆ ಹೇಳಿಕೆ ನೀಡಿದ್ದಿರಿ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ. ಪಕ್ಕದ ಜಮೀನಿನವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನಿಪಿ.8 ರ ಹೇಳಿಕೆ ನೀಡುವ ಸಮಯಕ್ಕೆ ನಿಮಗೆ ಗೊತ್ತಾದ ನಂತರ ಹದ್ದುಬಸ್ತು ಮಾಡಿಕೊಡಿ ಎಂದು ನೀವು ಅರ್ಜಿ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಉತ್ತರದ ಬಾಜುದಾರರು ನಿಮ್ಮ ದಾವಾ ಅನುಸೂಚಿ ಸ್ವತ್ತಿನ ಪೈಕಿ 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೂ ಕೂಡ ಉತ್ತರದ ಬಾಜುದಾರರು ನಿಮ್ಮ ಜೊತೆ ಅನ್ಯೋನ್ಯವಾಗಿದ್ದ ಕಾರಣ ನೀವು ಹದ್ದುಬಸ್ತು ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನ ಪೈಕಿ 7 ಗುಂಟೆ ಅಸ್ತಿಯನ್ನು ಒತ್ತುವರಿ ಮಾಡಿದ್ದಾನೆ ಎಂದು ದಾವಾದಲ್ಲಿ ಅಥವಾ ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ನಿಮ್ಮ ಬಾಬ್ತು ಯಾವುದೇ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನ ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿ ಹಸ್ತಕ್ಷೇಪ ಮಾಡಲು

ಪ್ರಯತ್ನಿಸಿದ್ದಾನೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಯು ಒತ್ತುವರಿ ಮಾಡುವ ಯಾವುದೇ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಗಲಾಟೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ನೀವು ಪೋಲೀಸರಿಗೆ ದೂರನ್ನು ನೀಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಪ್ರತಿವಾದಿಯ ನಡುವೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನೀವು ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಈ ದಾವಾವನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಗಲಾಟೆ ಇಲ್ಲ ವ್ಯಾಜ್ಯ ಇಲ್ಲ, ಆದರೆ ನನಗೆ ಇದ್ದ 1 ಎಕರೆ 25 ಗುಂಟೆ ಆಸ್ತಿಯನ್ನು ಆಳತೆ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ನುಡಿಯುತ್ತಾರೆ.

3. ನಿಮ್ಮ ತೋಟಕ್ಕೆ ನೀರನ್ನು ಹಾಯಿಸುವ ಸಲುವಾಗಿ ದಾವಾಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ನೀವು ಒಂದು ಕಾಲುವೆಯನ್ನು ಮಾಡಿಕೊಂಡಿದ್ದಿರಿ ಎಂದರೆ ಸರಿಯಲ್ಲ. ಸದರಿ ಕಾಲುವೆಯ ದಕ್ಷಿಣ ದಿಕ್ಕಿಗೆ ನಿಮ್ಮ ಜಮೀನಿನಲ್ಲಿ ನೀವು ಬಾಳೆ ಗಿಡವನ್ನು ನಾಟಿ ಮಾಡಿದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವಾ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.